O.S. ನಂಬರಃ 72/2024

ಪಿ. ಡಬ್ಲ್ಯೂಃ 1

ದಿಃ 24-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ನಿಮ್ಮ ಜಾಗದಲ್ಲಿ ಪ್ರತಿವಾದಿಯು ಕೊಳವೆ ಬಾವಿಯನ್ನು 10 ವರ್ಷದ ಹಿಂದೆ ತೆಗೆದಿರುತ್ತಾರೆ ಎಂಬ ವಿಷಯವನ್ನು ನಿಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. 10 ವರ್ಷದಿಂದ ಕೊಳವೆ ಬಾವಿ ಇತ್ತು ಎಂದು ನಿಮ್ಮ ದಾವೆಯಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಯಾವ ಪ್ಯಾರಾದಲ್ಲಿ ಕೊಳವೆ ಬಾವಿಯ ಬಗ್ಗೆ ಪ್ರಸ್ತಾಪ ಇರುತ್ತದೆ ಎಂದರೆ ಸಾಕ್ಷಿಯು 2ನೇ ಪುಟದಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ಚೀರೆಕಲ್ಲನ್ನು ಮೊದಲು ತೆಗೆದು ನಂತರ ಬೋರನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಎರಡೂ ಒಟ್ಟಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಚೀರೇ ಕಲ್ಲನ್ನು ತೆಗೆದು ಬೋರನ್ನು ಹಾಕಿರುತ್ತಾರೆ ಎಂದು ಬರೆದಿರುವುದು ಸತ್ಯ ಇರುತ್ತಾ ಅಥವಾ ಸುಳ್ಳಾ ಎಂದರೆ ಸಾಕ್ಷಿಯು ಸತ್ಯ ಇರುತ್ತದೆ ಎಂದು ನುಡಿಯುತ್ತಾರೆ. ಚೀರೇ ಕಲ್ಲನ್ನು ಮಷಿಸಿನಿಂದ ತೆಗೆದಿರುತ್ತಾರೆ ಎಂದರೆ ಸರಿ. ಚೀರೆ ಕಲ್ಲನ್ನು ತೆಗೆಯುವಾಗ ರಾತ್ರಿಯಿಡಿ ಶಬ್ದವಾಗುತ್ತದೆ ಎಂದರೆ ಸರಿ. ಹಾಗೂ ಮಷಿನಿನಿಂದ ಕಟ್ ಮಾಡಬೇಕಾದರೆ ಪ್ರದೇಶದಲ್ಲಿ ಎಲ್ಲಾ ಧೂಳು

ಆಗುತ್ತದೆ ಎಂದರೆ ಸರಿ. ಕಲ್ಲಕಣಿ ಮಾಡಿ ಎಷ್ಟು ವರ್ಷ ಕಲ್ಲು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕಲ್ಲಕಣಿ ತೆಗೆದಾಗ ಎಷ್ಟು ಆಳ ಹೊಂಡ ಆಗಿತ್ತು ಎಂದರೆ ಸಾಕ್ಷಿಯು ಅಜಮಾಸು 30 ಅಡಿ ಆಳವಾಗಿರಬಹುದು ಎಂದು ನುಡಿಯುತ್ತಾರೆ. ಕಲ್ಲಕಣಿ ತೆಗೆಯುವಾಗ ಲಾರಿ, ಬುಲ್ಡೋಜರ್ ಹೋಗುವುದೆಲ್ಲ ಕಾಣಿಸುತ್ತದೆ ಎಂದರೆ ಸರಿ. ಕಲ್ಲಕಣಿ ಮಾಡುವಾಗ ನೀವಾಗಲಿ ಅಥವಾ ನಿಮ್ಮ ಕುಟುಂಬದವರಾಗಲಿ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ತಕರಾರನ್ನು ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ಗುಂಟೆ ಜಾಗದಲ್ಲಿ ಕಲ್ಲಕಣಿ ಮಾಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಕಲ್ಲಕಣಿ ಮಾಡಿದ ಜಾಗವು ಆ ನಂತರ ಕಲ್ಲು ಹಾಕಿ ಅದನ್ನು ಮುಚ್ಚಿ ಬಾಗಾಯ್ತು ಜಮೀನು ಆಗಿರುತ್ತದೆ ಎಂದರೆ ಸರಿ. ಕಲ್ಲಕಣಿ ಮಾಡುವಾಗ ಹಾಗೂ ಭಾಗಾಯ್ತು ಜಮೀನು ಆದಾಗ ಭಾವಿಯನ್ನು ತೆಗೆದ ಜಾಗವನ್ನು ನಿಮ್ಮ ಜಾಗದಲ್ಲಿ ಬರುತ್ತದೆ ಎಂದು ಸರಕಾರಿ ಇಲಾಖೆಗೆ ಏನಾದರೂ ತಕರಾರನ್ನು ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮೃತ ಅಣ್ಣನ ಪೂರ್ಣ ಹೆಸರು ಏನು ಎಂದರೆ ಸಾಕ್ಷಿಯು ಮಾರುತಿ ವಾಮಣ ನಾಯ್ಕ ಎಂದು ನುಡಿಯುತ್ತಾರೆ. ಅವರು ಎಲ್ಲಿ ವಾಸ್ತವ್ಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಜೊತೆಗೆ ಇರುತ್ತಿದ್ದರು ಎಂದು ನುಡಿಯುತ್ತಾರೆ. ಸರ್ವೆ ನಂ.86 ಹಿಸ್ಸಾ ಆಗಿರುವುದು ಕಬ್ಜಾ ವಹಿವಾಟಿ ಪ್ರಕಾರ ಹಿಸ್ಸಾ ಆಗಿರುವುದಿಲ್ಲ ಎಂದು ಸರ್ವೆ ಇಲಾಖೆಗೆ ಪ್ರತಿವಾದಿಯು ತಕರಾರನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅವರು ಎಲ್ಲ ಸುಳ್ಳನ್ನು ಹೇಳುತ್ತಾರೆ ಎಂದು ನುಡಿಯುತ್ತಾರೆ. ನೀವು ವಾಂಟಣಿ ಪೋಡಿ ಮಾಡುವ ಸಂದರ್ಭದಲ್ಲೂ ಸಹ ಪ್ರತಿವಾದಿಯು ಸರ್ವೆ ಇಲಾಖೆಗೆ

ತಕರಾರನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಜಾಗವನ್ನು ಕೊನೆಯದಾಗಿ ಯಾವಾಗ ಸರ್ವೆ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು 2023 ನೇ ಸಾಲಿನಲ್ಲಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೋಜನಿ ನಕಾಶೆಗೆ ಪ್ರತಿವಾದಿಯು ತಕರಾರನ್ನು ಸಲ್ಲಿಸಿದ್ದು, ಈಗ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅಣ್ಣ ಇದ್ದ ಸಂದರ್ಭದಲ್ಲಿ ಮಾತುಕತೆಯಲ್ಲಿ ಯಾರ್ಯಾರು ಇದ್ದರು ಎಂದರೆ ಸಾಕ್ಷಿಯು ನನ್ನ ಅಣ್ಣ, ನಾನು ಜಟ್ಟಿ ವಾಮಣ ನಾಯ್ಕ ಇದ್ದರು ಎಂದು ನುಡಿಯುತ್ತಾರೆ. ಮಾತುಕತೆ ಬಗ್ಗೆ ಬರವಣಿಗೆ ಆಗಿರುತ್ತಾ ಎಂದರೆ ಸಾಕ್ಷಿಯು ಬರವಣಿಗೆ ಆಗಿರುವುದಿಲ್ಲ, ನಮ್ಮ ಜಾಗವನ್ನು ಕೇಳಲು ಹೋದಾಗ ನಮ್ಮ ಮೈಮೇಲೆ ಬರುತ್ತಾರೆ ಎಂದು ನುಡಿಯುತ್ತಾರೆ. ಮಾತುಕತೆಯಲ್ಲಿ ಸರ್ವೆ ನಂ.86 ರಲ್ಲಿ ಹಿಸ್ಸಾ ಮಾಡಿರುವುದು ಸರಿಯಾಗಿರುವುದಿಲ್ಲ, ಪುನಃ ಸರ್ವೆ ಮಾಡಿ ಹೊಸದಾಗಿ ಹಿಸ್ಸೆ ಮಾಡಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಹಿಸ್ಸಾ ಮಾಡಿರುವುದು ಸರಿಯಾಗಿರುವುದಿಲ್ಲ, ಪುನಃ ಸರ್ವೆ ಮಾಡಿ, ಹಿಸ್ಸಾ ಮಾಡಿದರೆ ಎಲ್ಲ ಸರಿಹೋಗುತ್ತದೆ ಎಂದು ಪ್ರತಿವಾದಿಯು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.